**"ಪ್ರತಿಯೊಬ್ಬ ಸ್ತ್ರೀಪುರುಷರನ್ನೂ ದೇವರಂತೆ ನೋಡಿ. ನೀವು ಯಾರಿಗೂ ಸಹಾಯಮಾಡಲಾರಿರಿ. ಬೇಕಾದರೆ ನೀವು ಸೇವೆ ಮಾಡಬಹುದು. ನಿಮಗೆ ಆ ಭಾಗ್ಯ ಬಂದರೆ ನೀವು ಭಗವಂತನ ಮಕ್ಕಳನ್ನು ಪೂಜಿಸಬಹುದು. ಆತನನ್ನು ಪೂಜಿಸಬಹುದು. ಭಗವಂತನು ತನ್ನ ಮಕ್ಕಳ ಸೇವೆಗೆ ನಿಮಗೆ ಅವಕಾಶ ಒದಗಿಸಿಕೊಟ್ಟರೆ ನೀವೇ ಧನ್ಯರು ಎಂದು ಭಾವಿಸಿ. ನಿಮ್ಮ ಸಮಾನರಿಲ್ಲವೆಂದು ಭಾವಿಸಬೇಡಿ. ಆ ಸದವಕಾಶ ಇತರರಿಗೆ ದೊರೆಯದೆ ನಿಮಗೆ ದೊರೆತುದಕ್ಕೆ ನೀವೇ ಧನ್ಯರು. ಅದನ್ನು ಒಂದು ಪೂಜೆಯಂತೆ ಮಾಡಿ. ನಾವು ಬಡವರಲ್ಲಿ ದೇವರನ್ನು ನೋಡಬೇಕು. ನಮ್ಮ ಮುಕ್ತಿಗಾಗಿ ನಾವು ಅವರ ಪೂಜೆ ಮಾಡಬೇಕು. ದೀನರು, ದುಃಖಿಗಳು ನಮ್ಮ ಮೋಕ್ಷಕ್ಕಾಗಿಯೇ ಇರುವರು. ರೋಗಿಯಂತೆ, ಹುಚ್ಚನಂತೆ, ಕುಷ್ಠನಂತೆ, ಪಾಪಿಯಂತೆ ದೇವರು ಬರುವನು. ಇವು ನನ್ನ ಕೆಚ್ಚಿನ ನುಡಿಗಳು. ಭಗವಂತನನ್ನು ಹಲವು ರೂಪಗಳಲ್ಲಿ ಪೂಜಿಸುವುದಕ್ಕೆ ನನಗೆ ಅವಕಾಶ ದೊರಕಿರುವುದು ಮಹಾಪುಣ್ಯವೆಂದೇ ಸಾರುತ್ತೇನೆ."**

– *ಸ್ವಾಮಿ ವಿವೇಕಾನಂದ (ಕೃತಿಶ್ರೇಣಿ, ೩–೧೨೪)*

**ಅಥ ಮಾಂ ಸರ್ವಭೂತೇಷು ಭೂತಾತ್ಮಾನಂ ಕೃತಾಲಯಂ ।**
**ಅರ್ಹಯೇದ್ದಾನಮಾನಾಭ್ಯಾಂ ಮೈತ್ರ್ಯಾಭಿನ್ನೇನ ಚಕ್ಷುಷಾ ॥**

(*ಭಾಗವತ, ೨:೨೯:೨೭*)

"ಎಲ್ಲ ಜೀವಿಗಳನ್ನೂ ನನ್ನ ಆಲಯವನ್ನಾಗಿ ಮಾಡಿಕೊಂಡು ಅವರ ಆತ್ಮಗಳಾಗಿ ನಾನು ನೆಲೆಸಿರುವೆನು. ಆದ್ದರಿಂದ ಅವರನ್ನು ತನ್ನಂತೆಯೇ ಎಂದು ಭಾವಿಸುತ್ತ, ಅತ್ಯಂತ ಪ್ರೀತಿಯಿಂದಲೂ ಗೌರವದಿಂದಲೂ ದಾನದ ಮೂಲಕವೂ ಪೂಜಿಸಬೇಕು."

ಸಮುದ್ರಮಥನದ ಸಂದರ್ಭದಲ್ಲಿ ಹಾಲಾಹಲ ವಿಷವು ಹೊರಬಂದು ಇಡೀ ಜಗತ್ತನ್ನು ದಹಿಸುತ್ತಿರುವಾಗ ಶಿವನು ಲೋಕೋದ್ಧಾರಕ್ಕಾಗಿ ಆ ವಿಷವನ್ನು ತಾನೇ ಕುಡಿಯುತ್ತಾನೆ. ಆ ಸನ್ನಿವೇಶದಲ್ಲಿ ಈ ಕೆಳಗಿನ ಮಾತು ಬರುತ್ತದೆ :

**ತಪ್ಯಂತೇ ಲೋಕತಾಪೇನ ಸಾಧವಃ ಪ್ರಾಯಶೋ ಜನಾಃ ।**
**ಪರಮಾರಾಧನಂ ತದ್ಧಿ ಪುರುಷಸ್ಯಾಖಿಲಾತ್ಮನಃ ॥**

(*ಭಾಗವತ, ೮:೭:೪೪*)

"ಸಾಮಾನ್ಯವಾಗಿ ಸಾಧುಪುರುಷರು ಜನರ ದುಃಖವನ್ನು ಕಂಡು ತಾವೂ ದುಃಖಕ್ಕೊಳಗಾಗುತ್ತಾರೆ. ಇದೇ ಪರಮಾತ್ಮನ ಶ್ರೇಷ್ಠ ಆರಾಧನೆ. ಏಕೆಂದರೆ ಪರಮಾತ್ಮನು ಎಲ್ಲ ಜೀವಿಗಳಲ್ಲಿಯೂ ನೆಲೆಸಿರುತ್ತಾನೆ."

ಈ ದೃಷ್ಟಿಯಿಂದ ನೋಡಿದಾಗ ಎಲ್ಲ ಕೆಲಸಗಳೂ ಪೂಜೆಯಾಗಿ ಮಾರ್ಪಡುತ್ತವೆ. ಸಾಂಪ್ರದಾಯಿಕ ಅದ್ವೈತ ವೇದಾಂತದ ಪ್ರಕಾರ ಜ್ಞಾನವೊಂದೇ ಮುಕ್ತಿಗೆ ಸಾಧನ; ಕರ್ಮದಿಂದ ಕೇವಲ ಚಿತ್ತಶುದ್ಧಿಯಾಗುತ್ತದೆ (**ಚಿತ್ತಸ್ಯ ಶುದ್ಧಯೇ ಕರ್ಮ ನ ತು ವಸ್ತೂಪಲಬ್ಧಯೇ**). ಕರ್ಮದಿಂದ ನಾವು ಏನನ್ನಾದರೂ ಪಡೆಯಬಹುದು (**ಆಪ್ಯ**), ಉತ್ಪಾದಿಸಬಹುದು (**ಉತ್ಪಾದ್ಯ**), ಸಂಸ್ಕಾರಗೊಳಿಸಬಹುದು (**ಸಂಸ್ಕಾರ್ಯ**) ಮತ್ತು ವಿಕೃತಗೊಳಿಸಬಹುದು (**ವಿಕಾರ್ಯ**). ಆದರೆ ಆತ್ಮವು 'ಸಿದ್ಧ' ವಸ್ತು, 'ಸಾಧ್ಯ' ವಸ್ತುವಲ್ಲ; ಮೇಲಿನ ನಾಲ್ಕು ಕಾರ್ಯಗಳಿಗೆ ಅದು ಹೊರತಾಗಿರುವುದು. ಆದ್ದರಿಂದ ಕರ್ಮಕ್ಕೆ ಅತೀತವಾದುದು. ಕರ್ಮದಿಂದ ಆತ್ಮವಲ್ಲದುದನ್ನು ನಿವಾರಿಸಬಹುದು. ಆಗ ಆತ್ಮವು ತಾನೇತಾನಾಗಿ ಪ್ರಕಾಶಿಸುವುದು.

ಒಂದು ದೀಪವಿದೆ ಎಂದು ಭಾವಿಸೋಣ. ಆ ದೀಪಕ್ಕೆ ಹಲವಾರು ಆವರಣಗಳಿರುವುದರಿಂದ ಅದರ ಪ್ರಕಾಶ ಅತ್ಯಂತ ಮಂದವಾಗಿ ಪ್ರಕಾಶಿಸುತ್ತಿದೆ. ಈಗ ಒಂದೊಂದು ಆವರಣವನ್ನು ತೆಗೆಯುತ್ತ ಹೋದರೆ ಅದರ ಪ್ರಕಾಶ ಹೆಚ್ಚು ಹೆಚ್ಚು ಕಾಣಿಸುವುದು. ಎಲ್ಲ ಆವರಣಗಳನ್ನೂ ತೆಗೆದಾಗ ಅದು ಪೂರ್ಣಪ್ರಕಾಶದಿಂದ ಬೆಳಗುವುದು. ಈ ಸಂದರ್ಭದಲ್ಲಿ ದೀಪದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ, ಅದು ಒಂದೇ ರೀತಿ ಪ್ರಕಾಶಿಸುತ್ತಿರುವುದು ಎಂಬುದನ್ನು ನಾವು ಗಮನಿಸಬೇಕು. ಆವರಣವನ್ನು ತೆಗೆಯುವ ಕರ್ಮದಿಂದ ದೀಪದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಹಾಗೆಯೇ ಕರ್ಮದಿಂದ ಆತ್ಮಜ್ಯೋತಿಯ ಆವರಣವನ್ನು ತೆಗೆಯಬಹುದೇ ಹೊರತು, ಅದನ್ನು ಪಡೆಯಲಾಗುವುದಿಲ್ಲ ಹಾಗೂ ಬದಲಾಯಿಸಲೂ ಆಗುವುದಿಲ್ಲ. ಧ್ಯಾನಜಪಾದಿ ಸಾಧನೆಗಳೂ ಕರ್ಮಕ್ಷೇತ್ರದಲ್ಲಿಯೇ ಬರುತ್ತವೆ. ಅವೆಲ್ಲವೂ ಪ್ರಕಾಶಾವರಣದ ನಿವಾರಣೆಯೂ ಆಗಿವೆ. ಪೂಜಾದೃಷ್ಟಿಯಿಂದ, ನಿಷ್ಕಾಮಭಾವದಿಂದ ಮಾಡಿದ ಎಲ್ಲ ಕರ್ಮವೂ ಈ ಪ್ರಕಾಶಾವರಣದ ನಿವಾರಣೆಗೆ ಸಾಧನವಾಗಬಹುದು. ಈ ದೃಷ್ಟಿಯಿಂದ ನೋಡಿದಾಗ ಎಲ್ಲ ಕರ್ಮಗಳೂ ಆಧ್ಯಾತ್ಮಿಕ ಸಾಧನೆಯ ಅಂಗವಾಗಬಹುದು. ಸ್ವಾಮಿ ವಿವೇಕಾನಂದರ ಈ ತತ್ತ್ವವನ್ನು ಕುರಿತಾಗಿ ಬರೆಯುತ್ತ ನಿವೇದಿತಾ ಹೀಗೆ ಹೇಳುತ್ತಾರೆ:

**"ಅನೇಕ ಮತ್ತು ಏಕ ಎರಡೂ ಒಂದೇ ಸತ್ಯವಾದರೆ, ಎಲ್ಲ ರೀತಿಯ ಪೂಜೆ ಮಾತ್ರವಲ್ಲದೆ, ಎಲ್ಲ ಬಗೆಯ ಕೆಲಸವೂ, ಎಲ್ಲ ಬಗೆಯ, ಎಲ್ಲ ವಿಧದ ಸೃಷ್ಟಿಯೂ ಸಾಕ್ಷಾತ್ಕಾರದ ಮಾರ್ಗಗಳೇ ಆಗುತ್ತವೆ. ಲೌಕಿಕ ಮತ್ತು ಪಾರಮಾರ್ಥಿಕ ಎಂಬ ಭೇದ ಇನ್ನಿಲ್ಲ. ದುಡಿಮೆಯೇ ಪ್ರಾರ್ಥನೆ, ಆತ್ಮವಿಜಯವೇ ತ್ಯಾಗ, ಜೀವನವೇ ಧರ್ಮ... ಅವರ (ವಿವೇಕಾನಂದರ) ಪಾಲಿಗೆ ಕಾರ್ಖಾನೆ, ಪಾಠಶಾಲೆ, ಹೊಲ ಇವುಗಳೂ, ಸಂನ್ಯಾಸಿಯ ಕುಟೀರ ಮತ್ತು ದೇವಸ್ಥಾನಗಳಷ್ಟೇ ಭಗವಂತನನ್ನು ಸಂಧಿಸುವುದಕ್ಕೆ ಸತ್ಯವಾದ ಮತ್ತು ಯೋಗ್ಯವಾದ ಸ್ಥಳಗಳು. ಅವರ ದೃಷ್ಟಿಯಲ್ಲಿ ಮಾನವಸೇವೆ ಮತ್ತು ಭಗವತ್ಪೂಜೆಗೂ, ಪುರುಷಪ್ರಯತ್ನ ಮತ್ತು ನಂಬಿಕೆಗೂ, ನೈತಿಕತೆ ಮತ್ತು ಆಧ್ಯಾತ್ಮಿಕತೆಗೂ ಯಾವ ವ್ಯತ್ಯಾಸವೂ ಇಲ್ಲ"** (*ಕೃತಿಶ್ರೇಣಿ ೧, ಪೀಠಿಕೆ,* XIX, XX)


ವಿವೇಕಾನಂದರ ವೇದಾಂತವು ಮಾನವನ ಆಶೋತ್ತರಗಳೆಲ್ಲವನ್ನೂ ಒಳಗೊಳ್ಳುತ್ತದೆ. ಅದು ಎಲ್ಲವನ್ನೂ ಎಲ್ಲರನ್ನೂ ಒಳಗೊಳ್ಳುವುದಾಗಿದೆ. "ಕಲೆ, ವಿಜ್ಞಾನ ಮತ್ತು ಧರ್ಮ ಇವು ಒಂದೇ ಸತ್ಯದ ವಿವಿಧ ಅಭಿವ್ಯಕ್ತಿಗಳು" ಎಂದು ಅವರೇ ಹೇಳುತ್ತಾರೆ. "ನಾವು ಯಾರನ್ನೂ ತಿರಸ್ಕರಿಸುವುದಿಲ್ಲ. ಆಸ್ತಿಕನಾಗಲಿ, ನಾಸ್ತಿಕನಾಗಲಿ, ಪ್ರಕೃತಿಪೂಜಕನಾಗಲಿ, ಅಜ್ಞೇಯವಾದಿಯಾಗಲಿ, ಬಹುದೇವತಾವಾದಿಯಾಗಲಿ, ಏಕತತ್ತ್ವವಾದಿಯಾಗಲಿ ಯಾರನ್ನೂ ತಿರಸ್ಕರಿಸುವುದಿಲ್ಲ. ಇಲ್ಲಿ ಶಿಷ್ಯನಾಗುವುದಕ್ಕೆ ಒಂದೇ ಅರ್ಹತೆಯೆಂದರೆ ಆತನ ಶೀಲವು ಅತ್ಯಂತ ವಿಶಾಲವೂ, ಅತ್ಯಂತ ಆಳವೂ ಆಗಿರಬೇಕು" ಎನ್ನುತ್ತಾರೆ ವಿವೇಕಾನಂದರು.

ವೇದಾಂತದ ಪ್ರಕಾರ ದೇವರು ನಿರ್ಗುಣ ಮತ್ತು ನಿರಾಕಾರ. ಉಪನಿಷತ್ತುಗಳಲ್ಲಿ ದೇವರನ್ನು, ಸತ್ಯಂ ಜ್ಞಾನಮ್ ಅನಂತಂ ಎಂದು ವಿವರಿಸಲಾಗಿದೆ. ಯಾವಾಗಲೂ ಬದಲಾಗದೇ ಇರುವುದು ಸತ್ಯ. ಬದಲಾಗುವ ವಸ್ತು ನಿರಂತರವಾಗಿ ಬದಲಾಗುತ್ತಿರಬೇಕು ಮತ್ತು ಅದರ ಕಣಕಣವೂ ಬದಲಾಗುತ್ತಿರಬೇಕು. ಆದ್ದರಿಂದ ಅದು ಪ್ರತಿಕ್ಷಣವೂ ಬೇರೆಯ ವಸ್ತುವೇ ಆಗಿರುತ್ತದೆ. ಹೀಗಿರುವಾಗ ಅದನ್ನು ಸತ್ಯವೆಂದು ತಾತ್ವಿಕ ದೃಷ್ಟಿಯಿಂದ ಪರಿಗಣಿಸಲಾಗುವುದಿಲ್ಲ. ಯಥಾರ್ಥದೃಷ್ಟಿಯಿಂದ ದೇವರೊಬ್ಬನೇ ಸತ್ಯ, ಬೇರೆಲ್ಲವೂ ಕ್ಷಣಿಕ. ಅವನು ಜ್ಞಾನಸ್ವರೂಪ. ಈ ವಿಷಯವನ್ನು ಆತ್ಮನ ಬಗ್ಗೆ ಹೇಳುವಾಗ ವಿವರಿಸಲಾಗಿದೆ. ಅವನು ಅನಂತ – ದೇಶತಃ ಕಾಲತಃ ಮತ್ತು ವಸ್ತುತಃ. ಅವನು ಸರ್ವವ್ಯಾಪಿಯಾಗಿರುವುದರಿಂದ ದೇಶತಃ ಅನಂತ. ಅವನು ಶಾಶ್ವತನಾಗಿರುವುದರಿಂದ ಕಾಲತಃ ಅನಂತ. ಅವನೊಬ್ಬನೇ ಇರುವುದರಿಂದ – ಏಕಮೇವಾದ್ವಿತೀಯಂ ಬ್ರಹ್ಮ – ವಸ್ತುತಃ ಅನಂತ. ಎರಡು ಅನಂತಗಳಿದ್ದರೆ ಒಂದು ಮತ್ತೊಂದರಿಂದ ಸೀಮಿತಗೊಳ್ಳುತ್ತದೆ. ಇಂತಹ ಅನಂತ ಸತ್ಯವು ನಿರ್ಗುಣವಾಗಿರಲೇಬೇಕು. ಸಗುಣವಾಗಿದ್ದರೆ ಅದನ್ನು ಇನ್ನೊಂದರಿಂದ ಪ್ರತ್ಯೇಕಿಸಬಹುದಿತ್ತು. ಇನ್ನೊಂದಿಲ್ಲದೆ ಇರುವುದರಿಂದ ಅದು ನಿರ್ಗುಣ. ಯಾವುದೇ ಗುಣವನ್ನೂ ಇನ್ನೊಂದು ಗುಣವಿಲ್ಲದೆ ಗುರುತಿಸಲಾಗುವುದಿಲ್ಲ. ಇನ್ನೊಂದಿಲ್ಲದಿದ್ದರೂ ದೇವರನ್ನು ಏಕೆ ಸಗುಣನೆಂದು ಕರೆಯಬಾರದು? ಅವನು ಗುಣವಂತನಾದರೆ ಅವನು ಬೇರೆ, ಗುಣ ಬೇರೆ ಎಂದು ಪ್ರತ್ಯೇಕಿಸಬೇಕಾಗುತ್ತದೆ. ಆದರೆ ಯಾವುದೇ ಗುಣವನ್ನೂ ಅದನ್ನು ಹೊಂದಿರುವ ವಸ್ತುವಿನಿಂದ ಪ್ರತ್ಯೇಕಿಸಿ ಭಾವಿಸಲಾಗುವುದಿಲ್ಲ. ಅಂದರೆ ಗುಣಗಳಿಗೆ ವಸ್ತುವಿಗಿಂದ ಪ್ರತ್ಯೇಕವಾದ ಅಸ್ತಿತ್ವವಿಲ್ಲ. ಹಾಗೆಯೇ ಗುಣಗಳಿಂದ ಪ್ರತ್ಯೇಕವಾದ ವಸ್ತುವನ್ನೂ ನಾವು ಭಾವಿಸಲಾರೆವು. ಯಾವುದೇ ವಸ್ತುವನ್ನು ನಾವು ವಿಶ್ಲೇಷಿಸುತ್ತ ಹೋದರೂ ಇಂದ್ರಿಯಗುಣಗಳಿಂದ ಪ್ರತ್ಯೇಕವಾದ ಯಾವ ವಸ್ತುವೂ ನಮಗೆ ಸಿಗಲಾರದು. ಆತ್ಯಂತಿಕ ವಿಶ್ಲೇಷಣೆಗೆ ನಿಲುಕದೇ ಇರುವುದರಿಂದಲೇ ಈ ಜಗತ್ತನ್ನು ಮಿಥ್ಯೆ ಎಂದು ಕರೆದಿರುವುದು. ದೇವರೂ ಸಗುಣನಾದರೆ ಜಗತ್ತಿನಂತೆಯೇ ಅವನೂ ಮಿಥ್ಯೆಯಾಗುತ್ತಾನೆ, ಸವಿಕಾರನಾಗುತ್ತಾನೆ ಅಥವಾ ಕ್ಷಣಿಕನಾಗುತ್ತಾನೆ. ಆದ್ದರಿಂದಲೇ ದೇವರನ್ನು 'ನಿರ್ಗುಣ' ಎಂದು ಕರೆದಿರುವುದು. ಅವನು ನಿರ್ಗುಣನಾಗಿರುವುದರಿಂದಲೇ ಮಾತು, ಮನಸ್ಸು ಮತ್ತು ಇಂದ್ರಿಯಗಳಿಗೆ ಅತೀತನಾಗಿರುವುದು.

"ಬ್ರಹ್ಮನೊಬ್ಬನೇ ಎಂಜಲಾಗದೇ ಇರುವುದು" ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಬಾಯಿಯ ಮೂಲಕ ವಿವರಿಸುವುದರ ಮೂಲಕ ಎಲ್ಲವೂ ಎಂಜಲಾಗಿದೆ. ಆದರೆ ಇದುವರೆಗೆ ದೇವರು ಎಂಥವನೆಂದು ಯಾರಿಗೂ ವಿವರಿಸಲಾಗಿಲ್ಲ. ಯಾರ ಬಾಯಿಯ ಮೂಲಕವೂ ವ್ಯಕ್ತವಾಗದೇ ಇರುವುದರಿಂದ ಅವನೊಬ್ಬನೇ ಎಂಜಲಾಗದೇ ಉಳಿದಿರುವವನು. ಅವನನ್ನು ಅರಿಯಲು ಹೋದರೆ ಅವನಲ್ಲಿಯೇ ಕರಗಿಹೋಗಬೇಕಾಗುತ್ತದೆ. ಇದನ್ನು ವಿವರಿಸುವುದಕ್ಕೆ ಶ್ರೀರಾಮಕೃಷ್ಣರು ಉಪ್ಪಿನ ಗೊಂಬೆಯ ಉದಾಹರಣೆಯನ್ನು ಕೊಡುತ್ತಿದ್ದರು. ಒಂದು ಉಪ್ಪಿನ ಗೊಂಬೆಯು ಸಮುದ್ರವನ್ನು ಅಳೆಯಲು ಹೋಯಿತಂತೆ. ಅದು ನೀರನ್ನು ಸ್ಪರ್ಶಿಸುತ್ತಿದ್ದಂತೆಯೇ ಕರಗಿಹೋಯಿತು. ಈಗ ಸಮುದ್ರದ ಆಳವನ್ನು ಹೇಳುವವರಾರು?

ಶ್ರೀರಾಮಕೃಷ್ಣರು ಹೇಳುತ್ತಿದ್ದರು, ದೇವರು ನಿರ್ಗುಣ, ನಿರಾಕಾರನೂ ಹೌದು; ಸಗುಣ ಸಾಕಾರನೂ ಹೌದು, ಹಾಗೆಯೇ ಇದೆಲ್ಲವನ್ನೂ ಮೀರಿಯೂ ಇರುವನು. ಅಸ್ತಿ–ನಾಸ್ತಿಗಳನ್ನೂ ಅವನು ಮೀರಿರುವನು ಎನ್ನುತ್ತಿದ್ದರು ಅವರು. ಅವನು ಏನೇನು ಆಗಿರುವನೋ ಯಾರೂ ಹೇಳಲಾಗುವುದಿಲ್ಲ. ಅಂದರೆ ನಮ್ಮ ವಿವರಣೆಯ ಮಿತಿಗೆ ಅವನನ್ನು ಒಳಪಡಿಸಲಾಗುವುದಿಲ್ಲ. ಅವರು ಇನ್ನೊಂದು ಉದಾಹರಣೆಯನ್ನೂ ಕೊಡುತ್ತಿದ್ದರು. ಒಂದು ಸಕ್ಕರೆಯ ರಾಶಿಯಿತ್ತು. ಒಂದು ಇರುವೆ ಬಂದು ಒಂದು ಹರಳನ್ನು ಬಾಯಲ್ಲಿ ಕಚ್ಚಿಕೊಂಡು ಹೋಗುತ್ತ, "ನಾಳೆ ಬಂದು ಇಡೀ ಸಕ್ಕರೆಯ ರಾಶಿಯನ್ನು ತೆಗೆದುಕೊಂಡು ಹೋಗುತ್ತೇನೆ" ಎಂದು ಭಾವಿಸಿತಂತೆ. ಸಕ್ಕರೆಯ ರಾಶಿಯೇ ಆ ದೇವರು. ಶುಕದೇವಾದಿ ಮಹರ್ಷಿಗಳೂ ಕೂಡ ಒಂದು ಇರುವೆ ಇದ್ದಂತೆ, ಅಷ್ಟೆ ಆ ಭಗವಂತನ ಅಲ್ಪಾಂಶದಿಂದಲೇ ಅವರು ತೃಪ್ತರಾಗುತ್ತಾರೆ.

"ಭಗವಂತ ಎಂಬ ನಿರಾಕಾರವಾದ ನೀರು ಭಕ್ತಿಯ ಶೈತ್ಯದಿಂದ ಸಾಕಾರಗೊಂಡು ಅನಂತರ ಜ್ಞಾನಸೂರ್ಯನ ತಾಪದಿಂದ ಕರಗಿ ಮತ್ತೆ ನಿರಾಕಾರವಾಗುವುದು" ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಎಲ್ಲ ಸ್ಥಿತಿಯಲ್ಲಿಯೂ ನೀರು ನೀರಾಗಿಯೇ ಇರುವಂತೆ ಭಗವಂತನ ಸ್ವರೂಪದಲ್ಲಿಯೂ ಯಾವ ಬದಲಾವಣೆಯೂ ಆಗುವುದಿಲ್ಲ. ನೀರನ್ನು ವಿವಿಧ ಆಕಾರದ ಪಾತ್ರೆಗಳಿಗೆ ಸುರಿದರೆ ನೀರು ಆಯಾ ಪಾತ್ರೆಗಳ ಆಕಾರವನ್ನು ಪಡೆಯುತ್ತದೆ. ಹಾಗೆಯೇ ವಿವಿಧ ಮನಸ್ಸುಗಳ ಮೂಲಕ ಭಗವಂತನನ್ನು ಚಿಂತಿಸುವಾಗ ಆಯಾ ಮನಸ್ಸಿನ ಭಾವಗಳಿಗೆ ತಕ್ಕಂತೆ ಭಗವಂತನು ಸಗುಣನೋ, ಸಾಕಾರನೋ ಆಗುತ್ತಾನೆ. ಇಲ್ಲಿ ಮೂಲವಸ್ತುವನ್ನಾಗಲಿ, ಸಗುಣ–ಸಾಕಾರವನ್ನಾಗಲಿ ನಾವು ಕಡೆಗಣಿಸುವಂತಿಲ್ಲ. ಆದ್ದರಿಂದ ಸಗುಣ–ನಿರ್ಗುಣಗಳೆರಡೂ ಶ್ರೀರಾಮಕೃಷ್ಣರಿಗೆ ಪ್ರಿಯ, ಆದರಣೀಯ. ಇವೆರಡರಲ್ಲಿ ಮೂಲತಃ ಯಾವ ಭೇದವೂ ಇಲ್ಲ. ಒಬ್ಬ ಪ್ರಸಿದ್ಧ ನಟನು ವಿವಿಧ ನಾಟಕಗಳಲ್ಲಿ ರಾಮ, ರಾವಣ ಮುಂತಾದ ಬೇರೆ ಬೇರೆ ಪಾತ್ರಗಳನ್ನು ಹಾಕಿಕೊಂಡು ಬರುತ್ತಾನೆ. ಪ್ರೇಕ್ಷಕರು ಅವನನ್ನು ನಟನನ್ನಾಗಿಯೂ ಕಾಣುತ್ತಾರೆ ಹಾಗೂ ರಾಮರಾವಣಾದಿ ರೂಪಗಳಾಗಿಯೂ ಕಾಣುತ್ತಾರೆ. ಶ್ರೀರಾಮಕೃಷ್ಣರು ಹಾಗೆಯೇ ಎಲ್ಲವನ್ನೂ ಚೈತನ್ಯಮಯವಾಗಿಯೂ ಕಾಣುತ್ತಿದ್ದರು ಹಾಗೂ ವಿವಿಧಾಕಾರದ ಭೌತವಸ್ತುಗಳಾಗಿಯೂ ಕಾಣುತ್ತಿದ್ದರು. ವಸ್ತು ಒಂದೇ. ಅದೇ ನಾಮ–ರೂಪಗಳಿಂದ ಬೇರೆ ಬೇರೆಯಾಗಿ ಕಾಣುತ್ತಿದೆ, ಅಷ್ಟೆ. ಭಗವಂತನು ಯಾವುದೇ ವಿವರಣೆಗೆ ನಿಲುಕದವನು. ಅವನನ್ನು ವಿವರಿಸುವ ಪ್ರಯತ್ನವೇ ಎಲ್ಲ ಧಾರ್ಮಿಕ ಕಲಹಗಳಿಗೂ ಮೂಲ. ಶ್ರೀರಾಮಕೃಷ್ಣರು ಯಾವುದೇ ನಿರ್ದಿಷ್ಟ ವಿವರಣೆಯನ್ನೂ ನೀಡುವುದಿಲ್ಲ. ಸನಾತನ ವೇದಾಂತವು "ನೇತಿ, ನೇತಿ" ಮಾರ್ಗದಿಂದ ಯಾವುದು ದೇವರಲ್ಲ ಎಂದು ಹೇಳುತ್ತದೆ; ಶ್ರೀರಾಮಕೃಷ್ಣರು ಎಲ್ಲವೂ ದೇವರು ಎಂದು ಹೇಳುತ್ತಾರೆ. ಸರ್ವಂ ಖಲ್ವಿದಂ ಬ್ರಹ್ಮ (ಇದೆಲ್ಲವೂ ಬ್ರಹ್ಮ) ಎಂಬ ಉಪನಿಷದ್ವಾಕ್ಯವು ಶ್ರೀರಾಮಕೃಷ್ಣರ ದರ್ಶನವನ್ನು ಸಮರ್ಪಕವಾಗಿ ಪ್ರತಿಬಿಂಬಿಸುತ್ತದೆ. (ಮುಂದುವರಿಯುವುದು)




ಬ್ರಹ್ಮಜ್ಞಾನವನ್ನು ಪಡೆಯಲು ಬೇಕಾದ ಅರ್ಹತೆಯನ್ನು ಸಂಪಾದಿಸಿಕೊಳ್ಳಲು ಅವಶ್ಯವಾಗಿ ಕೈಗೊಳ್ಳಬೇಕಾದ ನಾಲ್ಕು ಮುಖ್ಯ ಸಾಧನಗಳು ಹೀಗಿವೆ: **ನಿತ್ಯಾನಿತ್ಯ ವಸ್ತು ವಿವೇಕ**, **ಇಹಾಮುತ್ರ ಫಲಭೋಗ ವಿರಾಗ**, **ಶಮದಮಾದಿ ಷಟ್‌ಸಂಪತ್ತು** ಮತ್ತು **ಮುಮುಕ್ಷುತ್ವ** ಇವುಗಳನ್ನು 'ಸಾಧನಚತುಷ್ಟಯ' ಎನ್ನುತ್ತಾರೆ. ಇದರಲ್ಲಿ ಮೂರನೆಯದಾದ ಶಮದಮಾದಿ ಷಟ್‌ಸಂಪತ್ತಿನ ಬಗ್ಗೆ ಈ ಲೇಖನದಲ್ಲಿ ವಿಚಾರ ಮಾಡಲಾಗಿದೆ.

ತಾಪತ್ರಯಗಳಿಂದ ಚೆನ್ನಾಗಿ ಬಾಧಿಸಲ್ಪಟ್ಟ ಜೀವಿಯು ಸಂಸಾರದಲ್ಲಿರುವ ಸುಖವೆಲ್ಲವೂ ಕ್ಷಣಿಕ ಎಂದು ನಿರ್ಧರಿಸುವ ಒಂದು ಪ್ರಜ್ಞಾಸ್ಥಿತಿಗೆ ಬಂದು ತಲುಪುತ್ತಾನೆ. ಪ್ರತಿಯೊಂದು ಸುಖದ ಅರಸುವಿಕೆಯೂ ಕಾಲಕ್ರಮೇಣ ದುಃಖ, ಕಷ್ಟನಷ್ಟಗಳನ್ನೇ ತಂದಿತ್ತಾಗ ನಾವು ಹಣ್ಣಾಗಿಬಿಡುತ್ತೇವೆ. "ಸಾಕಪ್ಪಾ ಸಾಕು, ಈ ಪ್ರಪಂಚ ನೀಡುವ ಸೋಗಲಾಡಿ ಸುಖವೂ ಸಾಕು; ಇವುಗಳು ತರುವ ಮಣಗಟ್ಟಲೆ ದುಃಖವೂ ಸಾಕು" ಎಂದು ನಮಗೆ ಅನ್ನಿಸಿ ಬಿಡುತ್ತದೆ. ವ್ಯಾಸರಾಯರು ಹೇಳುವಂತೆ, **"ಮೊದಲೆ ತೋರುತಿದೆ ಮಧುರ ವಿಷಯ ಸುಖ, ಕಡೆಯಲಿ ದುಃಖ ಅನೇಕ"** ಎಂದು ಅನ್ನಿಸುತ್ತದೆ. ಈ ಸಂದಿಗ್ಧ ಸಂದರ್ಭದಲ್ಲಿ ಪೂರ್ವಜನ್ಮಗಳ ಸಂಸ್ಕಾರದಿಂದಲೋ, ಗುರುವಾಕ್ಯಶಾಸ್ತ್ರಾದಿಗಳ ಶ್ರವಣದಿಂದ ಉಂಟಾದ ವಿಚಾರ ವಿವೇಕಸಾಮರ್ಥ್ಯದಿಂದಲೋ, ಸ್ವರ್ಗಸುಖವೂ ಕೂಡ ಅಶಾಶ್ವತವೆಂಬ ದೃಢವಾದ ವಿರಕ್ತಿಯು ಯಾವಾಗ ಮೂಡುತ್ತದೆಯೋ ಆಗ ಮೋಕ್ಷಾಕಾಂಕ್ಷೆ ಉಂಟಾಗುತ್ತದೆ. ಸುಖವನ್ನು ಅರಸುವ ಪ್ರತಿಯೊಂದು ಪ್ರಯತ್ನವೂ, ದುಃಖದಲ್ಲಿ ಪರ್ಯವಸಾನವಾಗುತ್ತದೆಂಬ ದೃಢ, ಗಭೀರ ಹಾಗೂ ಸೂಕ್ಷ್ಮ ಬುದ್ಧಿಯನ್ನು ವಿವೇಕ ವೈರಾಗ್ಯದಿಂದ ಬೆಳೆಸಿಕೊಂಡ ನಂತರವಷ್ಟೇ, ಇಂದ್ರಿಯಹತೋಟಿಯೇ ಪ್ರಾಮುಖ್ಯವಾಗಿ ಉಳ್ಳ ಶಮದಮಾದಿ ಸಾಧನೆಗಳನ್ನು ಆರಂಭಿಸಲು ಸಾಧಕನು ಅರ್ಹನಾಗುತ್ತಾನೆ.

ಈ ರೀತಿ ಮನವರಿಕೆಯಾಗಿದ್ದರೂ ಪ್ರಯತ್ನದ ತೀವ್ರತೆಯ ಕೊರತೆಯಿರುತ್ತದೆ. ಮನಸ್ಸು ಆಗಾಗ ಹೊರಗೆ ಇಣುಕುವುದನ್ನು ನಿಲ್ಲಿಸುವುದಿಲ್ಲ. ಶ್ರೀರಾಮಕೃಷ್ಣರು ಹೇಳುವಂತೆ, ಹದ್ದು ಎಷ್ಟೇ ಮೇಲೇರಿದರೂ ಅದರ ದೃಷ್ಟಿ ಮಾತ್ರ ಹೆಣದ ಗುಂಡಿಗಳ ಮೇಲೆ. ಮನಸ್ಸು ನಿರ್ಮಲವಾದ ಹಾಗೆಲ್ಲ ಮತ್ತೆ ಮತ್ತೆ ಕೊಳೆಯೂ ಆಗುತ್ತಿರುತ್ತದೆ. ನಾವು ವಸ್ತ್ರಗಳನ್ನು ದಿನಾ ತೊಳೆದು ಪರಿಶುಭ್ರವಾಗಿ ಅವುಗಳನ್ನು ಧರಿಸಿ, ಹೊರಹೋಗುತ್ತೇವೆ. ಮೈಯೆಲ್ಲಾ ಕಣ್ಣಾಗಿರಿಸಿಕೊಂಡರೂ ಮನೆಗೆ ಹಿಂತಿರುಗುವ ಹೊತ್ತಿಗೆ ಎಲ್ಲಾದರೂ ಕೊಳೆಮೆತ್ತಿಬಿಟ್ಟಿರುತ್ತದೆ. ಇದೂ ಹಾಗೆಯೇ.

**ಜ್ಞಾನಿನಾಮಪಿ ಚೇತಾಂಸಿ**
**ದೇವೀ ಭಗವತೀ ಹಿ ಸಾ ।**
**ಬಲಾದಾಕೃಷ್ಯ ಮೋಹಾಯ**
**ಮಹಾಮಾಯಾ ಪ್ರಯಚ್ಛತಿ ॥**

(ದೇವೀಸಪ್ತಶತೀ, ೧.೧.೫೬)

"ದೇವಿಯೂ, ಭಗವತಿಯೂ ಆದ ಆ ಮಹಾಮಾಯಿಯು ಜ್ಞಾನಿಗಳ ಮನಸ್ಸನ್ನು ಕೂಡ ಬಲಾತ್ಕಾರದಿಂದ ಸೆಳೆದು ಮೋಹಕ್ಕೆ ಸಿಲುಕುವಂತೆ ಮಾಡುತ್ತಾಳೆ."

ಎಂಥ ವೈರಾಗ್ಯವಂತರಾದವರೂ ತಮಗೆ ಆಗಾಗ ಉಂಟಾಗುವ ಪ್ರಾಪಂಚಿಕ ಪ್ರಲೋಭನೆಯಿಂದ ಭಗವನ್ವಿಮುಖರಾಗಿ ಸಂಸಾರ ಮುಖರಾಗಿಬಿಡುತ್ತಾರೆ. ಏಕೆಂದರೆ ಪ್ರಾಪಂಚಿಕ ಆಕರ್ಷಣೆಯು ಅಷ್ಟೊಂದು ಪ್ರಬಲವಾಗಿದೆ. ಸಾಧನೆಯೆಂಬ ನೌಕೆಯು ಪ್ರಲೋಭನೆಯ ಬಿರುಗಾಳಿಯ ಹೊಡೆತಕ್ಕೆ ಆಗಾಗ ಸಿಕ್ಕಿಬೀಳುತ್ತದೆ. ಕಿಂಚಿತ್ಕಾಲವಷ್ಟೆ ಅಜಾಗರೂಕತೆಯಿಂದ ಇದ್ದರೂ ಸಾಧಕನ ಅಮೂಲ್ಯವಾದ ಇಚ್ಛಾಶಕ್ತಿಯು ಅಪವ್ಯಯವಾಗುತ್ತದೆ. ಇಂತಹ ಸಂದರ್ಭದಲ್ಲಿ ಅವನನ್ನು ಕೈ ಹಿಡಿದು ಮುನ್ನಡೆಸುವುದು ಯಾವುದು ಗೊತ್ತೇ? ಅವನು ಹೊಂದಿರುವ ಶಮ, ದಮ ಮುಂತಾದ ಆರು ಸಾಧನಾ ಸಂಪತ್ತುಗಳು. ಅವು ನಮ್ಮನ್ನು ತಪ್ಪುದಾರಿಗೆ ಹೋಗದಂತೆ ತಡೆಯುತ್ತವೆ; ಅಕಸ್ಮಾತ್ ಅಂತಹ ದಾರಿಯನ್ನು ಹಿಡಿದರೂ ಪುನಃ ಸನ್ಮಾರ್ಗಕ್ಕೆ ಮರಳಲು ಸಹಾಯ ಮಾಡುತ್ತವೆ. ಸಾಧಕನಾದವನಿಗೆ ಬಾಹ್ಯಸಂಪತ್ತಿನಿಂದ ಯಾವ ಪ್ರಯೋಜನವೂ ಇಲ್ಲ. ಅವನು ನಿಜವಾಗಲೂ ಹೊಂದಿರಬೇಕಾದ ಆಸ್ತಿಯೆಂದರೆ ಈ ಆರು ಆಧ್ಯಾತ್ಮಿಕ ಸಂಪತ್ತುಗಳೇ.

## ಶಮ

ಎಲ್ಲಾ ಪ್ರಾಪಂಚಿಕ ಆಸೆಗಳು ಹುಟ್ಟುವುದು ನಮ್ಮ ಮನೋಸಂಕಲ್ಪದಿಂದಲೇ. ನಮ್ಮ ಅಭಿಲಾಷೆಗಳನ್ನು ಪೂರೈಸಲು, ನಾವು ಕೈಗೊಳ್ಳುವ ಮಾನಸಿಕ ನಿರ್ಣಯ ಅಥವಾ ನಿರ್ಧಾರವನ್ನೇ 'ಸಂಕಲ್ಪ' ಎಂದು ಕರೆಯುತ್ತೇವೆ. **ಸಂಕಲ್ಪಪ್ರಭವಾನ್ ಕಾಮಾನ್** – ಪ್ರತಿ ಸಂಕಲ್ಪದಿಂದ ಹುಟ್ಟುವುದೇ ಆಸೆ, ಕಾಮ ಅಥವಾ ತೃಷ್ಣೆ. ಆಸೆಗಳಿಂದ ವಿವೇಕ ಕ್ಷೀಣವಾಗುತ್ತದೆ; ಪ್ರಾಪಂಚಿಕ ವಸ್ತುಗಳ ಗುಣಗಾನವನ್ನು ಆಗಾಗ್ಗೆ ಕೇಳುತ್ತ, ಅವುಗಳಲ್ಲಿ

> **ಆಧ್ಯಾತ್ಮಿಕ ಸಾಧನೆಗೆ ತಕ್ಕ ದೈಹಿಕ ಮತ್ತು ಮಾನಸಿಕ ತಯಾರಿಯನ್ನು ಮಾಡಿಕೊಳ್ಳಬೇಕು. ಅದಕ್ಕಾಗಿ ನಾಲ್ಕು ಸಾಧನೆಗಳನ್ನು ಶ್ರೀಶಂಕರಾಚಾರ್ಯರು ಹೇಳಿದ್ದಾರೆ. ಅವುಗಳಲ್ಲಿ ಒಂದಾದ ಶಮದಮಾದಿ ಆರು ಸಾಧನಾಸಂಪತ್ತುಗಳನ್ನು ಶಾಸ್ತ್ರೋಕ್ತವಾಗಿ ವಿವರಿಸಿರುವ ಸ್ವಾಮೀಜಿಯವರು ಕೊಡಗಿನ ಪೊನ್ನಂಪೇಟೆಯ ರಾಮಕೃಷ್ಣ ಶಾರದಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ಲೇಖಕರು ಮತ್ತು ಭಾಷಣಕಾರರು.**

ಸದಾ ರಮಿಸುವ ಬುದ್ಧಿ ಉಂಟಾಗುತ್ತದೆ; ಅವುಗಳಲ್ಲಿಯೇ ಸಾಂಗತ್ಯ ಕೂಡ ಮೂಡುತ್ತದೆ. ಈ ಪ್ರಕ್ರಿಯೆಯು ಆಸೆಗಳನ್ನು ಪೂರೈಸಿಕೊಳ್ಳುವಲ್ಲಿ ಪರ್ಯವಸಾನವಾಗುತ್ತದೆ. ವಿವೇಕವು ಈಗಾಗಲೇ ಮಂಕಾಗಿಬಿಟ್ಟಿರುವುದರಿಂದ, ಮನಸ್ಸು ದುರ್ಬಲವಾಗಿ ಪ್ರಾಪಂಚಿಕ ಆಸೆಗಳ ಜಾಡನ್ನು ಹಿಡಿದು ಹೊರಟೇಬಿಡುತ್ತದೆ. ಸಾಧಿಸಬೇಕೆಂದಿದ್ದ ಮೋಕ್ಷದ ವಿಚಾರವು ಮರೆತುಹೋಗುತ್ತದೆ. ಈ ಬಗೆಯ ಅಧಃಪತನವನ್ನು ಅವಶ್ಯವಾಗಿ ತಡೆಯಲೇಬೇಕು. ಸಾಧನೆಯಲ್ಲಿ ಅಭಿರುಚಿ ಪಡೆದ ಮನಸ್ಸು, ವಿವೇಕವೈರಾಗ್ಯಗಳನ್ನು ಕಳೆದುಕೊಳ್ಳದಂತೆ ಮತ್ತು ಗುರಿ ಸೇರುವವರೆಗೂ ಚಿತ್ತವಿಕ್ಷೇಪ ವಾಗದಂತೆ ತಡೆಯುವ ಮನೋನಿಗ್ರಹವನ್ನೇ 'ಶಮ' ಎಂದು ಕರೆಯುವುದು.

**ವಿರಜ್ಯ ವಿಷಯವ್ರಾತಾದ್ ದೋಷದೃಷ್ಟ್ಯಾ ಮುಹುರ್ಮುಹುಃ ।**
**ಸ್ವಲಕ್ಷ್ಯೇ ನಿಯತಾವಸ್ಥಾ ಮನಸಃ ಶಮ ಉಚ್ಯತೇ ॥**

**ವಿಷಯವಸ್ತುಗಳಲ್ಲಿ ಪುನಃ ಪುನಃ ದೋಷವನ್ನು ನೋಡುವುದರ ಮೂಲಕ, ಅವುಗಳನ್ನು ಮನಸ್ಸಿನಿಂದ ಬೇರ್ಪಡಿಸಿ, ತನ್ನ ಗುರಿಯಲ್ಲಿ ಅದನ್ನು ನಿಯಮದಿಂದ ಸ್ಥಾಪಿಸುವುದೇ 'ಶಮ' ಎನ್ನಿಸಿಕೊಳ್ಳುತ್ತದೆ.** (ವಿವೇಕಚೂಡಾಮಣಿ, ೨೨)

ಬಾಹ್ಯ ವಿಷಯಾಕರ್ಷಣೆಗಳಷ್ಟೇ ಅಲ್ಲದೆ ಆಂತರಿಕ ವಾಸನೆಗಳಿಂದಲೂ ಮನಸ್ಸಿನಲ್ಲಿ ವಿಷಯಾಸಕ್ತಿಯು ಉಂಟಾಗುತ್ತಿರುತ್ತದೆ. ಇದು ಬಾಹ್ಯವಿಷಯಾಸಕ್ತಿಗಿಂತಲೂ ಪ್ರಬಲವಾದದ್ದು. ಅವುಗಳಿಂದ ಮನಸ್ಸನ್ನು ವಿವೇಕವೆಂಬ ಕಡಿವಾಣದಿಂದ ಹಿಡಿದೆಳೆದು, ಆತ್ಮಮುಖವನ್ನಾಗಿ ಮಾಡುವ ಪ್ರಕ್ರಿಯೆಯೇ 'ಶಮ.'

ವಿಷಯವಸ್ತುಗಳು ನಶ್ವರವಾದುವು. ಹೀಗಾಗಿ ಅವುಗಳಿಂದ ಲಭಿಸುವ ಸುಖ ಕೂಡ ಅಶಾಶ್ವತವಾದುದು. ನಿಜವಾಗಿ ಹೇಳಬೇಕಾದರೆ ಅದು ಸುಖಭ್ರಾಂತಿಯಲ್ಲದೆ ಬೇರೆಯಲ್ಲ. ಆದ್ದರಿಂದ ವಿಷಯವಸ್ತುಗಳಲ್ಲಿ ದೋಷವನ್ನು ಕಾಣಬೇಕು ಎಂದು ಶಂಕರಾಚಾರ್ಯರು ವಿಧಿಸುತ್ತಾರೆ. ಅವಿದ್ಯೆ ಅಥವಾ ಮಾಯೆಯು ಅತ್ಯಂತ ಪ್ರಬಲವಾದುದು. ಅದರ ಆಕರ್ಷಣೆ ಮತ್ತೆ ಮತ್ತೆ ನಮ್ಮನ್ನು ಮೋಹಗೊಳಿಸುತ್ತದೆ. ಅದರಿಂದ ತಪ್ಪಿಸಿಕೊಳ್ಳಲು ಮೇಲೆ ಹೇಳಿದ ದೋಷದೃಷ್ಟಿಯ ಭಾವನೆಯನ್ನು ಮತ್ತೆ ಮತ್ತೆ ತಂದುಕೊಳ್ಳುವುದು ಅವಶ್ಯಕ. ಆ ಮೂಲಕ ವಿಷಯಾಸಕ್ತಿಯಿಂದ ನಮ್ಮ ಮನಸ್ಸನ್ನು ಬಿಡಿಸಿಕೊಳ್ಳಬೇಕು. ಹಾಗೆ ಬೇರ್ಪಟ್ಟ ಮನಸ್ಸನ್ನು ನಮ್ಮ ಗುರಿಯಾದ ಬ್ರಹ್ಮಾನುಸಂಧಾನದಲ್ಲಿ ನೆಲೆ ನಿಲ್ಲಿಸಬೇಕು. ಇದನ್ನೇ 'ಶಮ' ಎಂದು ಕರೆಯುವುದು. ಇದು ವಿವೇಕಚೂಡಾಮಣಿಯಲ್ಲಿ ಶ್ರೀಶಂಕರಾಚಾರ್ಯರು ವ್ಯಕ್ತಪಡಿಸುವ ಅಭಿಪ್ರಾಯ.

## ದಮ

ಪರಮೇಶ್ವರನ ಮಾಯೆಯೇ ಅಂತಹುದು. ಅವನು ನಮ್ಮ ಇಂದ್ರಿಯಗಳನ್ನು ಹೊರಗೆ ಹೋಗುವಂತೆ ಮಾಡಿಬಿಟ್ಟಿದ್ದಾನೆ. ವಾಯುವನ್ನು ಹಿಡಿಯುವುದು ಅಸಾಧ್ಯ. ಹಾಗೆಯೇ ಮನಸ್ಸಿನ ನಿಯಂತ್ರಣ ಕೂಡ ಎಂದು ಅರ್ಜುನನು ಶ್ರೀಕೃಷ್ಣನ ಬಳಿ ತನ್ನ ಕಷ್ಟವನ್ನು ತೋಡಿಕೊಳ್ಳುತ್ತಾನೆ. ಆದ್ದರಿಂದ ಆಂತರಿಕ ನಿಯಂತ್ರಣವಾದ 'ಶಮ'ದ ಸಾಧನೆಗೆ ಮೊದಲು, ಬಾಹ್ಯ ಇಂದ್ರಿಯಗಳನ್ನು ನಿಯಂತ್ರಿಸುವುದು ಮುಮುಕ್ಷುವಿನ ಆದ್ಯ ಕರ್ತವ್ಯ. ಪಂಚ ಜ್ಞಾನೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಗೆ ಮತ್ತು ಚರ್ಮಗಳ ಮೂಲಕ ಕ್ರಮವಾಗಿ ಉಂಟಾಗುವ ರೂಪ, ಶಬ್ದ, ಗಂಧ, ರಸ ಮತ್ತು ಸ್ಪರ್ಶಗಳೆಂಬ ಅನುಭವಗಳನ್ನು ಹಾಗೂ ಅವುಗಳನ್ನು ಹೊಂದಲು ಬೇಕಾಗುವ ಕರ್ಮೇಂದ್ರಿಯಗಳಾದ ಕೈ, ಕಾಲು ಮುಂತಾದ ಪಂಚ ಕರ್ಮೇಂದ್ರಿಯಗಳ ಚಟುವಟಿಕೆಗಳನ್ನು ಪ್ರಯತ್ನಪಟ್ಟು ತಡೆಯುವುದೇ 'ದಮ' ಎನ್ನಿಸಿಕೊಳ್ಳುತ್ತದೆ.

**ವಿಷಯೇಭ್ಯಃ ಪರಾವರ್ತ್ಯ ಸ್ಥಾಪನಂ ಸ್ವಸ್ವಗೋಲಕೇ ।**
**ಉಭಯೇಷಾಮ್ ಇಂದ್ರಿಯಾಣಾಂ**
**ಸ ದಮಃ ಪರಿಕೀರ್ತಿತಃ ॥**

**ಎರಡು ಬಗೆಯ ಇಂದ್ರಿಯಗಳನ್ನೂ (ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳು) ವಿಷಯವಸ್ತುಗಳಿಂದ ಹಿಂತಿರುಗಿಸಿ, ತಮ್ಮ ತಮ್ಮ ಗೋಲಕಗಳಲ್ಲಿ (ಕಣ್ಣು, ಕಿವಿ ಮುಂತಾದ ಇಂದ್ರಿಯಸ್ಥಾನಗಳಲ್ಲಿ) ಸ್ಥಾಪಿಸುವುದೇ 'ದಮ' ಎನ್ನಿಸುತ್ತದೆ.**
(ವಿವೇಕಚೂಡಾಮಣಿ, ೨೩)

'ದಮ' ವೂ ಕೂಡ 'ಶಮ'ದಂತೆ ಒಂದು ಮನೋವ್ಯಾಪಾರ. ಅಂಥ ಮನೋನಿಗ್ರಹವನ್ನು ಒಮ್ಮೆಗೇ ಸಾಧಿಸುವುದು ದುಸ್ಸಾಧ್ಯ. ಮನಸ್ಸಿನಲ್ಲಿ ನಡೆಯುವ ಹೋರಾಟಕ್ಕೆ ಬಾಹ್ಯ ಬೆಂಬಲವಿಲ್ಲದಿದ್ದರೆ ಮನಃಕ್ಷೋಭೆಯು ಇನ್ನೂ ಹೆಚ್ಚಾಗಿಬಿಡುವುದು. ಏಕೆಂದರೆ ಮನಸ್ಸು ನವದ್ವಾರಗಳ ಮೂಲಕ ಹೊರಮುಖವಾಗಿರುತ್ತದೆ; ಬಾಹ್ಯ ಪ್ರಪಂಚದಲ್ಲಿರುವ ಇಂದ್ರಿಯಗ್ರಾಹ್ಯ ಭೋಗವಸ್ತುಗಳನ್ನು ಅನುಭವಿಸುವ ಬಲವಾದ ಅಭ್ಯಾಸಕ್ಕೆ ಒಳಗಾಗಿಬಿಟ್ಟಿರುತ್ತದೆ. ಅಂತಹ ಮನಸ್ಸು ಎಷ್ಟೇ ಒತ್ತಡವನ್ನು ಹೇರಿದರೂ, ಅದರ ಅಭಿಲಾಷೆ ಹೊರಗಡೆ ಕಾರ್ಯಗತವಾಗದಂತೆ, ಪ್ರಾಪಂಚಿಕ ವಸ್ತುವಿನೊಡನೆ ನಿರಂತರ ಸಂಪರ್ಕವಿರುವ ಜ್ಞಾನೇಂದ್ರಿಯಗಳ ಹಾಗೂ ಕರ್ಮೇಂದ್ರಿಯಗಳ ಚಟುವಟಿಕೆಗಳನ್ನು ತಡೆಯುವುದೇ 'ದಮ' ಎನ್ನಿಸಿಕೊಳ್ಳುತ್ತದೆ. ದಮವು ಬಲವಾದಂತೆಲ್ಲಾ ಶಮವು ಸುಲಭವಾಗುತ್ತದೆ. ಉದಾಹರಣೆಗೆ ನಮ್ಮ ಮುಂದೆ ಆಕರ್ಷಕ ವಸ್ತುವೊಂದು ಹಾದುಹೋದಾಗ, ಮನಸ್ಸಿನಲ್ಲಿ ಎಷ್ಟೇ ತಳಮಳವಾದರೂ ತಲೆ ತಗ್ಗಿಸಿಕೊಂಡು, ನಮ್ಮ ದೃಷ್ಟಿಗೆ ಬೀಳದಂತೆ ಜಾಗರೂಕರಾಗಿರಬೇಕು. ಹೇಗೆ ಮಧುಮೇಹದ ರೋಗಿಯು, ಮನಸ್ಸು ಎಷ್ಟೇ ಪರಿತಪಿಸಿದರೂ, ಸಿಹಿತಿಂಡಿಗಳನ್ನು ತಿನ್ನದಂತೆ ಜಾಗರೂಕನಾಗಿರುತ್ತಾನೋ, ಅದೇ ರೀತಿ ಹೊರಗಿನ ಪ್ರಾಪಂಚಿಕ ವಸ್ತುಗಳ ಕಡೆಗೆ ಮನಸ್ಸು ಓಡಿಹೋಗದಿರುವಂತೆ ತಡೆದು ನಿಲ್ಲಿಸುವುದೇ ದಮ. ಪ್ರಾಪಂಚಿಕ ಸುಖದಿಂದಾಗುವ ಅನಾಹುತವು ಮನಸ್ಸಿಗೆ ಚೆನ್ನಾಗಿ ಮನವರಿಕೆಯಾದ ಮೇಲೆ, ಮೊದಮೊದಲಿಗೆ ಕಠಿಣವೆನಿಸುವ ನಿಗ್ರಹವು ಕೂಡ ಕ್ರಮೇಣ ಸ್ವಾಭಾವಿಕವಾಗಿಬಿಡುತ್ತದೆ. ಅಲ್ಲಿಯವರೆಗೂ ಪ್ರಬಲ ಪ್ರಯತ್ನ ಅತ್ಯಗತ್ಯ.

ಶಮದಮಗಳನ್ನು ಜೊತೆಜೊತೆಗೇ ಪಾಲಿಸಿಕೊಂಡು ಹೋಗಬೇಕು. ಧಾರ್ಮಿಕ ಕಟ್ಟುಪಾಡುಗಳು, ವ್ರತ, ಉಪವಾಸಗಳೆಲ್ಲ ಈ ದಮದ ಚೌಕಟ್ಟಿನಲ್ಲಿಯೇ ಬರುತ್ತವೆ. ಏಕಾದಶ ಇಂದ್ರಿಯಗಳ ಹತೋಟಿಯ ಕುರುಹಾಗಿರುವ ಏಕಾದಶಿ ವ್ರತವು ಅಂತಹ ಒಂದು ಆಚರಣೆ. ೧೧ನೇ ಇಂದ್ರಿಯವಾದ ಮನಸ್ಸನ್ನು ನಿಯಂತ್ರಿಸಿದರೆ